"ನನ್ನ ತಂಗಿ ಪಿಯುಸಿ ಫಸ್ಟ್ ಕ್ಲಾಸಲ್ಲಿ ಪಾಸು ಮಾಡೆವ್ಳೆ. ಅವುಳ್ನ ಹಳ್ಳಿಗೇಕೆ ಕೊಡಾನ?" ಎಂದು ನಕ್ಕಿದ್ದಳು. 'ಬಂದ ದಾರಿಗೆ ಸುಂಕ ಇಲ್ಲ' ಎಂಬಂತೆ ಊರಿಗೆ ತಂಗ್ಯನ ಫ್ಯಾಮಿಲಿ ವಾಪಸ್ಸಾಗಿತ್ತು. ತಂಗ್ಯನ ಮನಸ್ಸಿನಲ್ಲಿ ಹುಡುಗಿ ಚಿತ್ರ ಮುದ್ರೆ ಒತ್ತಿದಂತಿತ್ತು. ಮುದ್ದನುಮಕ್ಕ, "ಆಹಾ ಹುಡುಗಿ ಅಕ್ಕ ಬಲು ಬಿತ್ರಿ ಇದ್ದಂಗವ್ಳೆ. ಬೆಂಗಳ್ಳೂರ್ಗೆ ತಂಗೀನ ಕೊಡೋಳು ಹೆಣ್ಣು ನೋಡೋಕೆ ಯಾಕೆ ಹೇಳಿ ಕಳಿಸ್ಬೇಕಾಗಿತ್ತು." ಎಂದಾಗ ರಂಗಶ್ಯಾಮಣ್ಣ, "ಒಬ್ಬಟ್ಟು ತಿನ್ನೋಕೆ ಕಾಯಶ್ಯಾಗಿತ್ತೆನೋ, ಇದು ಒಂದು ಡ್ರಾಮ ಇರಲಿ ಅಂತ ಹೇಳಿ ಕಳ್ಸಿರ್ಬೇಕು. ಬೆಂಗಳೂರಿನಲ್ಲಿ ಬಾಳ್ತಿರೋರ ಬಾಳ್ನ ನಾನು ಕಾಣ್ದೋನೇನು ತೆಗಿ ಅತ್ತ, ಒಂಥರಾ ಅತ್ತಿ ಹಣ್ಣಿದ್ದಂಗೆ. ಮೇಲ್ ಥಳುಕ್, ಒಳ್ಗೆ ಹುಳುಕ್." ಎಂದು ಮಾತು ಸೇರಿಸಿದ್ದ.

ಅದಾದ ಆರು ತಿಂಗಳಿಗೆ ಇನ್ನೊಂದು ಸಂಬಂಧದಲ್ಲಿ ಮೊದಲು ಹೆಣ್ಣಿನ ಮನೆಯವರೇ ಗಂಡಿನ ಮನೆಯನ್ನು ನೋಡಲು ಬಂದಿದ್ದರು. ತಂಗ್ಯನು ಶೆಟ್ಟರ ಅಂಗಡಿಯಿಂದ ಲಿರಿಲ್ ಸೋಪು ತಂದು ಮೂರ್ನಾಲ್ಕು ಸಾರಿ ಹಾಕಿ ಸ್ನಾನ ಮಾಡಿ ಹೊಸ ಪ್ಯಾಂಟು ಶರ್ಟು ಹಾಕಿಕೊಂಡು ರೆಡಿಯಾಗಿದ್ದ. ಇದನ್ನೆಲ್ಲಾ ನೋಡುತ್ತಿದ್ದ ಎದುರು ಮನೆಯ ಅಂಜನಪ್ಪನು, "ಓಹೋ ಏನಪ್ಪಾ ತಂಗ್ಯ ಒಳ್ಳೆ ಸಿನಿಮಾ ಆಕ್ಟ್ರು ತಯಾರಾದಂಗೆ ತಯಾರಾಗಿದ್ದೀಯ. ಏನು ಅತ್ತೇನೆ ಮೆಚ್ಚಿಸ್ಬೇಕು ಅಂತ ಮಾಡಿದ್ದಿಯೇನೋ." ಎಂದು ರೇಗಿಸಿದ್ದ. "ಹೋಗ್ ಚಿಗಪ್ಪ ಅತ್ತ, ನಿಂದೆಲ್ಲಾ ಬರಿ ಇಂಥ ಮಾತುಗ್ಳೆ." ಎಂದು ನಾಚಿಕೊಂಡಿದ್ದ. ಹೆಣ್ಣಿನ ಕಡೆಯವರು ಐದು ಜನ ಬಂದಿದ್ದರು. ಒಬ್ಬೊಬ್ಬರು ಮೂರು ಮೂರು ಒಬ್ಬಟ್ಟು ತಿಂದು, ಒಬ್ಬಟ್ಟು ಸಾರನ್ನು ಚೆನ್ನಾಗಿದೆ ಎಂದು ನೆಕ್ಕಿದ್ದರು. ಮಾತುಕತೆಗೆ ಕುಂತಾಗ ಹೆಣ್ಣಿನ ಸೋದರತ್ತೆ ನಮ್ಮಮ್ಮಯ್ಯನಿಗೆ ಕಲರ್ ಟೀವಿ ನೋಡಿ ಪ್ರಾಕ್ಟೀಸ್ ಆಗೈತೆ. ಮುದ್ದಾಗಿ ಬೆಳೆಸಿದ್ದೀವಿ. ಹಂಗಾಗಿ ಬೇಸಾಯದ ಕೆಲಸ ನಮ್ಮುಡ್ಗಿಗೆ ಬರಲ್ಲ. ದಿನಕ್ಕೆ ಕನಿಷ್ಠ ಮೂರು ಧಾರಾವಾಹಿ ನೋಡ್ತಾಳೆ. ಕೇಬಲ್ ಕನೆಕ್ಷನ್ ಒಂದು ದಿನಾನೂ ಕಟ್ ಆಗ್ಬಾರ್ದು. ಇವೆಲ್ಲಾ ಕಂಡೀಷನ್ಗೆ ಒಪ್ಪಿದ್ರೆ ಹೆಣ್ಣು ಕೊಡೊ ಯೋಚ್ನೆ ಮಾಡಬಹುದು." ಎಂದಿದ್ದಳು ಎಲೆಯಡಿಕೆಯನ್ನು ನಮುಲುತ್ತಾ.

ಮುದ್ದನುಮಕ್ಕ, "ನಮ್ಮುಡ್ಗ ಒಬ್ಬೊಂಟಿ. ಬೇಸಾಯದ ಕೆಲ್ಸ ಬರ್ದಿದ್ಮೇಕೆ ಅಂಥ ಹೆಣ್ಣು ನಮ್ಮನೆಗೆ ಯಾತುಕ್ಕಮ್ಮ. ನಮ್ಮನೆಗೆ ಇರೋದು ಅದೇ ವೈಟ್ ಅಂಡ್ ಬ್ಲಾಕ್ ಹಳೆ ಟೀವಿ. ಸಾವಿರಾರು ರೂಪಾಯಿ ಬಂಡ್ವಾಳ ಹಾಕಿ ಕಲರ್ ಟೀವಿ ತರೋಕೆ ನಮ್ತಾವ ದುಡ್ಡೇನು ಕುಣಿತ ಇಲ್ಲ. ಮೂರೊತ್ತು ಧಾರಾವಾಹಿ ನೋಡ್ತಾ ಕುಂತ್ಕಂಡ್ರೆ ದುಡ್ದ್ ಬರೋ ನನ್ ಮಗ್ನಿಗೆ ಮುದ್ದೆ ತೊಳ್ಸಾಕೋರು ಯಾರು. ಯಾಸಟ್ಗೆ ನಿಮ್ಮ ಹೆಣ್ಣನ್ನ ನೀವೇ ಇಟ್ಕಳಿ. ನಮ್ಮ ಕಾಲದಲ್ಲಿ ಗಂಡಿನ ಮನೆಯೋರ ತಿಪ್ಪೆ ನೋಡೇ ಹೆಣ್ಣು ಕೊಡೋರು." ಎಂದು ಕಡ್ಡಿನ ಎರಡು ತುಂಡು ಮಾಡಿದಂಗೆ ಹೇಳಿದ್ಲು. ಮುದ್ದನುಮಕ್ಕನ ಮಾತುಗಳಿಂದ ಉರಿದರೂ ಬಂದ ಐದು ಜನ ಸುಮ್ಮನೆ ಬಾಯಿ ಅದುಮಿಕೊಂಡು ಹೊರಟು ಹೋಗಿದ್ದರು. ಇದಾದ ಎರಡು ತಿಂಗಳಲ್ಲೇ ಆ ಹೆಣ್ಣು ಬೆಂಗಳೂರಿನ ಯಾವ್ನೋನೋ ಆಟೊ ಡ್ರೈವರ್ ಜೊತೆಗೆ ಓಡಿ ಹೋದಳೆಂದು ಸುದ್ದಿ ಬಂದಿತ್ತು. ಮುದ್ದನುಮಕ್ಕ, "ಯಂಗೋ ನಮ್ಮ ರಂಗನಾಥ ಸ್ವಾಮಿನೇ ಕಾಪಾಡ್ದ ಬಿಡು. ಮದುವೆ ಆಗಿ ನಮ್ಮನೆಗೆ ಬಂದ್ಮೇಲೆ ಓಡೋಗಿದ್ರೆ ನಮ್ಮ ಮಾನ ಮರ್ಯಾದೆ ಬೀದಿಗೆ ಬಂದಿರೋದು." ಎಂದು ಗಂಡ ರಂಗಶ್ಯಾಮಣ್ಣನ ಹತ್ತಿರ ಹೇಳುತ್ತಿದ್ದುದ್ದನ್ನು ಕೇಳಿಸಿಕೊಂಡ ತಂಗ್ಯನು, 'ಥೂತ್ತೇರಿಕೆ ಅವಳು ಇನ್ನೆಂಥ ಕಿತ್ತೋದ್ ಹೆಣ್ಣಿರ್ಬೇಕು' ಎಂದು ತನ್ನಷ್ಟಕ್ಕೆ ತಾನೇ ಹೇಳಿಕೊಂಡು ನಗಾಡಿದ್ದ.

ಇದಾದ ನಂತರ ಮೂರ್ನಾಲ್ಕು ಕಡೆ ಹೆಣ್ಣು ನೋಡುವ ಶಾಸ್ತ್ರ ಮಾಡಿದ್ದಷ್ಟೇ ಬಂತು. ಊರಿನಲ್ಲಿ ತಂಗ್ಯನಂತೆ ಮದುವೆಯಾಗದ ಗಂಡುಗಳು ಮಸ್ತಾಗಿದ್ದವು. ಬೇಸಾಯ ಮಾಡುವ ಹುಡುಗರನ್ನು, ಊರಿಂದ ಬೆಂಗಳೂರಿಗೆ ಹೋಗಿ ಗಾರ್ಮೆಂಟ್‌ಗಳಲ್ಲಿ ಕೆಲಸ ಮಾಡುವ ಹುಡುಗರನ್ನು, ಆಟೊ